ನಿರ್ಣಯವನ್ನು ಅಂಗೀಕರಿಸಲಾಯಿತು ಮತ್ತು ನಿರ್ಣಯಕ್ಕೆ ಒಪ್ಪಿಗೆ ನೀಡಲಾಯಿತು

ಗಮನ ಸೆಳೆಯುವ ಸೂಚನೆ

ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಸುತ್ತುಗಟ್ಟಿ ಗ್ರಾಮದಲ್ಲಿ ದಿ. 19.3.2000 ರಂದು ನಡೆದ ಕೋಮುಗಲಭೆಯಲ್ಲಿ ಮೃತಪಟ್ಟ ಯುವಕನ ಕುಟುಂಬವರ್ಗಕ್ಕೆ ಪರಿಹಾರಧನ ನೀಡುವ ಬಗ್ಗೆ

+ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿನ ಸುತ್ತುಗಟ್ಟಿ ಗ್ರಾಮದಲ್ಲಿ ದಿ: 19.3.2000ದಂದು ದುರ್ಘಟನೆ ನಡೆದು, ಕೋಮುಗಲಭೆ ನಡೆದು ಅದರಲ್ಲಿ 32 ವರ್ಷದ ಒಬ್ಬ ಯುವಕ ಮರಣ ಹೊಂದಿದ್ದಾನೆ. ಇದರ ಬಗ್ಗೆ ಹಾಗೂ ಮರಣ ಹೊಂದಿದ ವ್ಯಕ್ತಿಯ ಕುಟುಂಬಕ್ಕೆ ಪರಿಹಾರ ಧನ ನೀಡುವ ಬಗ್ಗೆ ನಾನು ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಸದಸ್ಯರ ಗಮನ ಸೆಳೆಯುವ ಸೂಚನೆಗೆ, ನನ್ನ ಉತ್ತರ ಈ ರೀತಿ ಇದೆ.

"ದಿ: 19.3.2000ರಂದು ಬೆಳಿಗ್ಗೆ 10 ಗಂಟೆ ಸುಮಾರಿಗೆ ಸುತ್ತುಗಟ್ಟಿ ಗ್ರಾಮದ ಶ್ರೀ ವಾಗೀಶ್ ದಾನಪ್ಪ ಬಣಕಾರ್ ಮತ್ತು 57 ಜನರು ಅದೇ ಗ್ರಾಮದ ಚಂದ್ರಪ್ಪ, ರಾಜಶೇಖರಪ್ಪ ಮತ್ತು ಒಡೆಯನಪುರ್ ಇವರ ಮನೆ ಹತ್ತಿರ ಬಂದು ಜಗಳ ತೆಗೆದು, ಅವರ ಮೋಟಾರು ವಾಹನವನ್ನು ಜಖಂ ಮಾಡಿ, ಚಂದ್ರಪ್ಪ ಹಾಗೂ ಅವರ ಸಹೋದರ ಗಣೇಶ, ರಾಜಶೇಖರಪ್ಪ, ಒಡೆಯನಪುರ ಇವರಿಗೆ ಹೊಡೆದು, ಗಾಯಗೊಳಿಸಿರುತ್ತಾರೆ, ತೀವ್ರ ಗಾಯಕೊಂಡ ಗಣೇಶ, ರಾಜಶೇಖರಪ್ಪ, ಒಡೆಯನಪುರ ಇವರನ್ನು ಹಂಸಭಾವಿಯ ಸರ್ಕಾರಿ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಕರೆತಂದಾಗ ಅವರು ಮೃತಪಟ್ಟಿರುತ್ತಾರೆ. ಈ ಘಟನೆ ಬಗ್ಗೆ ಚಂದ್ರಪ್ಪ, ರಾಜಶೇಖರಪ್ಪ ಮತ್ತು ಒಡೆಯನಪುರ ಇವರ ದೂರಿನ ಮೇರೆಗೆ ಹಂಸಭಾವಿ ಪೋಲೀಸ್ ಠಾಣೆ ಅಪರಾಧ ಸಂ:9:2000 ಐಪಿಸಿ ಕಲಂ 143, 147, 148, 324, 427, 302 ಸಹ ಕಲಂ IPC 34 ರಡಿಯಲ್ಲಿ ಒಂದು ಕೇಸ್ ದಾಖಲಾಗಿರುತ್ತದೆ. ಈ ಪ್ರಕರಣ ವರದಿಯಾದ ತಕ್ಷಣ, ಜಿಲ್ಲಾ ಎಸ್ಪಿಯವರು ಸ್ಥಳಕ್ಕೆ ಭೇಟಿ ನೀಡಿ, ಮುಂದೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಪೋಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಿರುತ್ತಾರೆ. ಕೊಲೆಗೆ ಕಾರಣರಾದ 22 ಜನ ಆರೋಪಿಗಳನ್ನು ಅದೇ ದಿನ ಬಂಧಿಸಿ, ಕೋರ್ಟಿಗೆ ಹಾಜರುಪಡಿಸಿದ್ದು, ಅವರನ್ನು ದಿ: 1.4.2000ದವರೆಗೆ ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿದೆ. ಈ ಪ್ರಕರಣದಲ್ಲಿ ಮೃತಪಟ್ಟ ಗಣೇಶ, ರಾಜಶೇಖರಪ್ಪ, ಒಡೆಯನಪುರ ಈತನ ಕುಟುಂಬದವರಿಗೆ ಮತ್ತು ತೀವ್ರವಾಗಿ ಗಾಯಗೊಂಡ ಚಂದ್ರಪ್ಪ, ರಾಜಶೇಖರಪ್ಪ, ಒಡೆಯನಪುರ ಇವರಿಗೆ ಪರಿಹಾರ ಧನ ಕೊಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಸದ್ಯ, ಸುತ್ತುಗಟ್ಟಿ ಗ್ರಾಮದಲ್ಲಿ ಪರಿಸ್ಥಿತಿ ಸಂಪೂರ್ಣ ಶಾಂತವಾಗಿದ್ದು, ತನಿಖೆ ಮುಂದುವರಿದಿದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಗೃಹ ಸಚಿವರ ಉತ್ತರದಲ್ಲಿ, ಆ ಗ್ರಾಮದಲ್ಲಿ ಸಂಪೂರ್ಣ ಶಾಂತಿ ನೆಲೆಸಿದೆ ಎಂದು ಹೇಳಿದ್ದಾರೆ. ಈ ಘಟನೆ ನಡೆಯಲು, ಅದರ ಹಿನ್ನೆಲೆ ಏನು? ಮೊದಲಿನಿಂದಲೂ ಯಾವಾಗಲೂ ಶಾಂತಿ, ಸುವ್ಯವಸ್ಥೆ ಇದ್ದ ಗ್ರಾಮವದು. ಇವತ್ತು ಮೃತಪಟ್ಟ ಗಣೇಶಪ್ಪನಾಗಲೀ ಇವತ್ತು ಕೊಲೆಗೆ ಕಾರಣರಾದ ಆರೋಪಿಗಳಾಗಲಿ ಸಹೋದರ ಭಾವದಿಂದ ಜೀವನ ಸಾಗಿಸುತ್ತಿದ್ದರು. ಇಲ್ಲಿ ಜಾತಿಯ ಭಾವನೆಯನ್ನು ಕೆರಳಿಸಿ, ಒಂದು ಗುಂಪನ್ನು ಎತ್ತಿಕಟ್ಟಿ, ಇನ್ನೊಂದು ಜಾತಿಯ ಗುಂಪಿನ ಮೇಲೆ ಪ್ರಚೋದನಕಾರಿಯಾದ ಮಾತುಗಳನ್ನು ಹೇಳಿ, ಆ ಗ್ರಾಮಕ್ಕೆ ಹೋಗಿ ಆ ಜನರಲ್ಲಿ ದೋಷ ಮತ್ಸರ ಉಂಟು ಮಾಡಿದ್ದೇ ಘಟನೆಗೆ ಕಾರಣ. ಐಪಿಸಿ ಕಲಂ 109ರ ಪ್ರಕಾರ ಪ್ರಚೋದನೆ ಮಾಡಿದ ಈ ಒಂದು ಘಟನೆಗೆ ಕಾರಣೀಭೂತರಾದವರು ಯಾರು ಎನ್ನುವುದನ್ನು ಮಾನ್ಯ ಗೃಹ ಸಚಿವರು ತಮ್ಮ ಹೇಳಿಕೆಯಲ್ಲಿ ಹೇಳಿಲ್ಲ. ಶಾಂತಿ, ಸುವ್ಯವಸ್ಥೆ ನೆಲೆಸಬೇಕಾದರೆ, ಒಡೆದ ಮನಸ್ಸುಗಳನ್ನು ಒಂದು ಮಾಡುವ, ಜಾತಿಯ ಭಾವನೆಗಳನ್ನು ತೆಗೆದು ಹಾಕುವ, ಎರಡೂ ಗುಂಪುಗಳ ನಡುವೆ ಸಹೋದರ ಭಾವನೆ ಮೂಡಿಸುವ ಕೆಲಸವಾಗಿಲ್ಲ. ಈ ಘಟನೆಗೆ ಜಾತಿಯ ಪ್ರಚೋದನೆ ಹಚ್ಚಿ, ಗಣೇಶಪ್ಪನ ಕೊಲೆಯಾಗುವ ಹಂತಕ್ಕೆ ತಲುಪುವ ಬಗ್ಗೆ ಇನ್‌ವೆಸ್ಟಿಗೇಷನ್ ಆಗಿಲ್ಲ. ನಾನು ತಮ್ಮ ಮೂಲಕ ಕೇಳುವುದೇನೆಂದರೆ, ಪ್ರತಿಯೊಂದು ಘಟನೆ ನಡೆಯಬೇಕಾದರೆ ಅದರ ಹಿನ್ನಲೆ ಏನು? ಅದು ಅಲ್ಲಿರುವ ಪರಿಸರ, ವಾತಾವರಣವನ್ನು, ಶಾಂತಿಯನ್ನು ಹದಗೆಡಿಸುವ ವ್ಯಕ್ತಿಗಳಾರು? ಇದನ್ನು ಪೋಲೀಸ್‌ನವರು ಮೊದಲೇ ಗಮನಿಸಿದ್ದರೆ, ಈ ಕೊಲೆ ನಡೆಯುತ್ತಿರಲಿಲ್ಲ. ನಾನು ತಮ್ಮ ಮೂಲಕ ವಿನಂತಿಸುತ್ತೇನೆ, ಜನರ ಸಹೋದರ ಭಾವನೆಗಳನ್ನು ಕೆರಳಿಸಲು, ಅಲ್ಲಿ ಜಾತಿ ಭಾವನೆಯ ಉದ್ವೇಗಗಳನ್ನು, ದ್ವೇಷಗಳನ್ನು ಬೆಳೆಸಲು ಕಾರಣರಾದವರಾರು? ಇಲ್ಲಿ ಅಬೇಕರ್ ಯಾರು ಎನ್ನುವುದನ್ನು ತಪಾಸಣೆ ಮೂಲಕ ಗುರುತಿಸಬೇಕು. ಅಂತಹವರ ಬಗ್ಗೆ ಸರ್ಕಾರ ಕಾನೂನು ಕ್ರಮ ತೆಗೆದುಕೊಳ್ಳಬೇಕು. ಇದನ್ನು ಮಾಡದೆ ಹೋದರೆ ಪುನಃ ಪುನಃ ಈ ಗ್ರಾಮದಲ್ಲಿ ಜಾತಿಯ ವೈಷಮ್ಯಗಳು ಬೆಳೆದು ಇದು ಇಡೀ ಗ್ರಾಮಕ್ಕೆ ಹರಡಿಕೊಳ್ಳುವ ಪರಿಸ್ಥಿತಿ ಇದೆ. ಈ ಕೂಡಲೇ ಇಂತಹ ಸಮಾಜ ಘಾತುಕರನ್ನು ನಿರ್ಮೂಲನ ಮಾಡತಕ್ಕಂತಹ, ಸಮಾಜ ವಿರೋಧಿ ಕೆಲಸ ಮಾಡತಕ್ಕಂತಹ ಜನರ ಬಗ್ಗೆ ತಪಾಸಣೆ ಮಾಡಿ ಕ್ರಮ ತೆಗೆದುಕೊಳ್ಳಬೇಕು. ಎರಡನೆಯ ವಿಷಯ ಎಂದರೆ, ಇದನ್ನು ತಪಾಸಣೆ ಮಾಡಿ ಕಾನೂನು ಕ್ರಮ ತೆಗೆದುಕೊಳ್ಳದೆ ಹೋದರೆ ಇಂತಹ ಘಟನೆಗಳು ಇಂದೂ ನಾಳೆಯೂ ಕೆಲವೇ ಸಮಯದಲ್ಲಿ ಹಿರೇಕೆರೂರು ತಾಲ್ಲೂಕಿನಲ್ಲಿ ಇನ್ನು ಎಂಟು-ಹತ್ತು ಗ್ರಾಮಗಳಲ್ಲಿ ಇವೇ ವ್ಯಕ್ತಿಗಳು ಜಾತಿಯ ಭಾವನೆ ಕೆರಳಿಸಿ ದುರ್ಘಟನೆ ನಡೆಸತಕ್ಕಂತಹ, ಶಾಂತಿಯನ್ನು ಕದಡತಕ್ಕಂತಹ, ಕಾನೂನನ್ನು ಕೈಗೆತ್ತಿಕೊಂಡು ಕೆಲಸ ಮಾಡತಕ್ಕಂತ, ಜನ ತಮ್ಮ ಕೆಲಸ ಮುಂದುವರೆಸಿದರೆ, ಅವರಿಗೆ ಕಾನೂನು ಶಿಕ್ಷೆ ಕೊಡದೆ ಇದ್ದರೆ ಈ ತಾಲ್ಲೂಕಿನಲ್ಲಿ ಶಾಂತಿ ನೆಲೆಸುವುದು ಕಷ್ಟವಾಗುತ್ತದೆ. ತಮ್ಮ ಮೂಲಕ ಸರ್ಕಾರ ಮತ್ತು ಮಾನ್ಯ ಗೃಹ ಸಚಿವರ ಗಮನ ಸೆಳೆಯುತ್ತೇನೆ. ಎಲ್ಲೆಲ್ಲಿ ಇಂತಹ ಜಾತಿಯ ಪ್ರಚೋದನೆಗಳು ನಡೆದಿವೆ ಅದನ್ನು ನಿಯಂತ್ರಣ ಮಾಡಿ ಅಂತಹ ವ್ಯಕ್ತಿಗಳ ಮೇಲೆ ಕಾನೂನಿನ ಕ್ರಮ ಜರುಗಿಸಿ ತಾಲ್ಲೂಕಿನಲ್ಲಿ, ಗ್ರಾಮದಲ್ಲಿ ಶಾಂತಿ ನೆಲೆಸುವಂತೆ ಮಾಡಬೇಕೆಂದು ಹೇಳುತ್ತೇನೆ. ಸತ್ತ ನಂತರ ಮರಣೋತ್ತರ

ಶವಪರೀಕ್ಷೆ ನಡೆಸುವುದು ಸರಿ ಅಲ್ಲ. ಘಟನೆ ನಡೆಯುವ ಪೂರ್ವದಲ್ಲಿ ಅದರ ಹಿನ್ನೆಲೆಯನ್ನು ತಿಳಿದುಕೊಂಡು ಕಾನೂನಿನ ಕ್ರಮಗಳನ್ನು ಜರುಗಿಸಿದರೆ ಇಂತಹ ದುರ್ಘಟನೆ ನಡೆಯುವುದಿಲ್ಲ, ಪ್ರಾಣಾಪಾಯಗಳೂ ಆಗುವುದಿಲ್ಲ, ಕೊಲೆಗಳಾಗುವುದಿಲ್ಲ. ಅಲ್ಲೆಲ್ಲಾ ಆಶಾಂತಿಯನ್ನು ತೆಗೆದುಹಾಕುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಗೃಹ ಸಚಿವರು ಕೂಡಲೇ ಜಾತಿಯ ಪ್ರಚೋದನೆ ಮಾಡುವ ಜನ ಯಾರು, ಅವರು ಯಾವ ಪಕ್ಷದವರೇ ಇರಲಿ, ಯಾವ ಜಾತಿಯವರೇ ಇರಲಿ, ಸ್ವಜನ ಪಕ್ಷಪಾತ ಇಲ್ಲದೆ, ನಿಸ್ಪಕ್ಷಪಾತದಿಂದ ನಿರ್ದಾಕ್ಷಿಣ್ಯವಾಗಿ ತಪ್ಪಿತಸ್ಥರನ್ನು ಇಲ್ಲಿ ಪ್ರಚೋದನೆ ಮಾಡಿ ದುರ್ಘಟನೆಗೆ ಕಾರಣರಾದವರನ್ನು ಮುಂದೆ ಕಾರಣರಾಗಬಹುದಾದವರ ಬಗ್ಗೆ ವರದಿ ತರಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಅಲ್ಲಿ ಮರಣ ಹೊಂದಿದ 32 ವರ್ಷ ವಯಸ್ಸಿನ ಯುವಕ ಮದುವೆಯಾಗಿ ಕೇವಲ ಏಳು ತಿಂಗಳುಗಳಾಗಿವೆ. ಅವನಿಗೆ ತಂದೆ ಇಲ್ಲ, ಅಂತಹ ಒಬ್ಬ ಯುವಕ ಇವತ್ತು ಮರಣ ಹೊಂದಿದ್ದಾನೆ. ಅನೇಕ ಸಂದರ್ಭಗಳಲ್ಲಿ ಸರ್ಕಾರ ಪರಿಹಾರ ಕೊಟ್ಟಿದ್ದೂ ಉಂಟು. ಮಾನವೀಯತೆ ದೃಷ್ಟಿಯಿಂದ ಕಾನೂನಿನಲ್ಲಿ ಅವಕಾಶವಿಲ್ಲವೆಂದು ಮಾನ್ಯ ಗೃಹ ಸಚಿವರು ತಮ್ಮ ಹೇಳಿಕೆಯಲ್ಲಿ ಹೇಳಿದ್ದಾರೆ. ಎಂತೆಂತಹ ಸಂದರ್ಭಗಳಲ್ಲಿ ನಾವು ಸರ್ಕಾರದ ಮುಖಾಂತರ ಅಲ್ಲಿ ಅವರಿಗೆ ಹಣಕಾಸಿನ ನೆರವಿಗೆ ಬಂದಿದ್ದೇವೆ. ಮದುವೆಯಾಗಿ ಏಳು ತಿಂಗಳುಗಳಾಗಿವೆ, ತಂದೆ ಇಲ್ಲ. ಈ ಸಂದರ್ಭದಲ್ಲಿ ಸರ್ಕಾರ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಪರಿಹಾರವನ್ನು ಕೊಡತಕ್ಕಂತಹ ವ್ಯವಸ್ಥೆ ಮಾಡಬೇಕೆಂಬ ಒಂದು ಸಲಹೆಯನ್ನು ತಮ್ಮ ಮೂಲಕ ಮಾಡುತ್ತಿದ್ದೇನೆ. ನೊಂದವರಿಗೆ ಮಾನವೀಯ ದೃಷ್ಟಿಯಿಂದ ಕಾನೂನನ್ನು ಹೇಳುತ್ತಾ ಕೂತರೆ ಆಗುವುದಿಲ್ಲ. ಅಲ್ಲಿರತಕ್ಕಂತಹ ಅಸಹಾಯಕತೆ ಏನೆಂದರೆ ಅಲ್ಲಿ ದುಡಿಯುವವರು ಇಲ್ಲ, ಇಂತಹ ಸಂದರ್ಭದಲ್ಲಿ ಈ ದುರ್ಘಟನೆ ನಡೆದ ಸಂದರ್ಭವನ್ನು ನೋಡಿ ಸರ್ಕಾರ ಮಾನವೀಯತೆಯ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿ ಅಥವಾ ಯಾವುದೇ ನಿಧಿಯಿಂದ ಪರಿಹಾರವನ್ನು ಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

+ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಬನ್ನಿಕೋಡ್‌ರವರು ಇದರ ಬಗ್ಗೆ ಹೆಚ್ಚಿಗೆ ವಿವರ ಕೊಟ್ಟಿದ್ದಾರೆ. ನಾವು ಯಾವ ಹಂತಕ್ಕೆ ಮುಟ್ಟಿದ್ದೇವೆ ಎಂದು ಒಂದು ಶಬ್ದವನ್ನು ಹೇಳುತ್ತೇನೆ. ಇದುವರೆಗೆ ಸವರ್ಣೀಯರು ಮತ್ತು ಪರಿಶಿಷ್ಟ ಜಾತಿಯವರ ಘಟನೆ ನೋಡಿದ್ದೇವೆ. ಕೋಮುಗಲಭೆ ಜಾತಿ ಜಾತಿ ಮಧ್ಯೆ ನಡೆದಿದೆ. ಇದು ಯಾವ ಹಂತಕ್ಕೆ ಮುಟ್ಟಿದ್ದೇ ಎಂದರೆ, ಜಾತಿಯಲ್ಲಿ ಸಬ್ ಕ್ಯಾಸ್ಟ್ ಒಂದೇ ಜಾತಿಯ ಎರಡು ಉಪ ಜಾತಿಗಳಲ್ಲಿ ಈ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಚುನಾವಣೆ ನಂತರ ಆದ ಘಟನೆಗಳು. ಚುನಾವಣೆಯಿಂದ ಪ್ರಾರಂಭವಾದುದು ಅದರ ನಂತರ ಚುನಾವಣೆಯಲ್ಲಿ ಸೋಲು ಗೆಲವು ಎಲ್ಲರಿಗೂ ಇದ್ದುದು. ಜನರಲ್ಲಿ ಒಂದು ಭಾವನೆಯನ್ನು ಉದ್ರೇಕ ಮಾಡಿ ಈ ಘಟನೆಯಾದುದು. ಇದರ ಬಗ್ಗೆ ಸ್ವಲ್ಪ ಮಾಹಿತಿಯನ್ನು ತೆಗೆದುಕೊಂಡಿದ್ದರೆ ಪ್ರಾಯಶಃ ಈ ಘಟನೆಗಳು ಆಗುತ್ತಿರಲಿಲ್ಲ. ಆದ್ದರಿಂದ ಇನ್ನು ಎಷ್ಟೋ ಉಪಜಾತಿಗಳ ಮಧ್ಯೆ ಗಲಭೆಗಳಾಗುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅದಕ್ಕೋಸ್ಕರ ಈ ಹಂತದಲ್ಲಿ ಸರ್ಕಾರ ಕ್ರಮ ತೆಗೆದುಕೊಂಡು ಅನಾಹುತಗಳನ್ನು ನಿಲ್ಲಿಸತಕ್ಕಂತಹ ಕ್ರಮ ಕೈಗೊಳ್ಳಬೇಕು.

ಬೇರೆ ಬೇರೆ ಘಟನೆಗಳಲ್ಲಿ ಸರ್ಕಾರ ಪರಿಹಾರ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಏಳು ತಿಂಗಳ ಹಿಂದೆ ಮದುವೆಯಾದ ಯುವಕ ಮರಣ ಹೊಂದಿದ್ದಾನೆ. ಇನ್ನು ಮುಂದೆ ಆ ಹುಡುಗನ ಕುಟುಂಬ ಮತ್ತು ವಿಧವೆಗೆ ಸಹಾಯ ಮಾಡುವುದಕ್ಕೆ ಸಾಧ್ಯವಾದರೆ ಸರ್ಕಾರ ಮುಂದೆ ಬಂದು ಕಾನೂನಿನಲ್ಲಿ ಅವಕಾಶ ಇಲ್ಲ ಎನ್ನುವುದನ್ನು ಬಿಟ್ಟು ಕೊಡುವುದಾದರೆ ಯಾವುದಾದರೂ ನಿಧಿಯಿಂದ ಅವಕಾಶ ಮಾಡಿ ಕೊಡುವುದಕ್ಕೆ ಸಾಧ್ಯವಿದೆ. ಮಾನ್ಯ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಹಣ ಕೊಡುವುದಕ್ಕೆ ಮುಂದೆ ಬರಬೇಕೆಂದು ಹೇಳಿ, ಮಾನ್ಯ ಗೃಹ ಸಚಿವರು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಬಯಸುತ್ತೇನೆ.

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹಸಚಿವರು) : ಮಾನ್ಯ ಬನ್ನಿಕೋಡ್‌ರವರ ಕಳಕಳಿಯನ್ನು ನಾನು ಅರ್ಥಮಾಡಿಕೊಳ್ಳುತ್ತೇನೆ. ಆದರೆ ಕಾಂಪೆನ್‌ಸೇಷನ್ ಕೊಡತಕ್ಕಂಥದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಅದು ಅವರಿಗೂ ಗೊತ್ತಿದೆ. ಗೊತ್ತಿದ್ದೂ ಮಾನ್ಯ ಜಯಪ್ರಕಾಶ್ ಹೆಗಡೆ ಯವರು ಮತ್ತು ಅವರು ಒತ್ತಾಯ ಮಾಡುತ್ತಿದ್ದಾರೆ. ಕಾನೂನಿನಲ್ಲಿ ಅವಕಾಶ ಇದ್ದಿದ್ದರೆ ಮೊದಲನೇ ಮನುಷ್ಯ ನಾನು ಅವರು ಹೇಳಿದ ತಕ್ಷಣ ಕೊಡುತ್ತಿದ್ದೆ. ಆದರೆ ಕಾನೂನಿನಲ್ಲಿ ಅದಕ್ಕೆ ಅವಕಾಶವಿಲ್ಲ. ಅಟ್ರಾಸಿಟೀಸ್ ಕೇಸ್‌ಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಎಸ್‌ಸಿ-ಎಸ್‌ಟಿಯವರಿಗೆ ಕೊಡುತ್ತಾರೆ. ಕಮ್ಯುನಲ್ ಕ್ಲಾಷಸ್‌ನಲ್ಲಿ ಹಿಂದು ಮುಸ್ಲಿಂ ಆಗಿದ್ದರೆ ಕೊಡತಕ್ಕಂತಹ ವ್ಯವಸ್ಥೆ ಸರ್ಕಾರದಲ್ಲಿ ಇದೆ. ಆದರೆ ಕ್ರಿಮಿನಲ್ ಕೇಸ್‌ನಲ್ಲಿ ಜಗಳ ಆಡಿಕೊಂಡು, ಹೊಡೆದಾಟ ಮಾಡಿಕೊಂಡು ಸತ್ತಿದ್ದರೆ ಅದಕ್ಕೆ ಪರಿಹಾರ ಕೊಡತಕ್ಕಂತಹ ವ್ಯವಸ್ಥೆ ಇಲ್ಲ. ಜಾತಿ ಜಾತಿಗಳಲ್ಲಿ ಹೊಡೆದಾಡುತ್ತಿದ್ದರೆ ಅದು ನಾನು ಬಹಿರಂಗವಾಗಿ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ, ಮುಂದುವರೆದ ಜಾತಿ ಜಾತಿಗಳ ಬಗ್ಗೆ ನಾವು ಎಲ್ಲ ಕಡೆ ಹೇಳುವ ಹಾಗಿಲ್ಲ. ಇನ್ನು ಎರಡನೆಯದಾಗಿ ನನ್ನ ಸಲಹೆ ಏನೆಂದರೆ ಮಾನ್ಯ ಬನ್ನಿಕೋಡ್‌ರವರು ಕೂಡ ಆ ಭಾಗದ ಶಾಸಕರು. ಆ ತಾಲ್ಲೂಕಿಗೆ ಕೂಡ ಅವರ ಪ್ರಭಾವ ಇದೆ. ಅವರು ತಮ್ಮ ಪ್ರಭಾವವನ್ನು ಬೀರಿ ಅಲ್ಲಿ ಶಾಂತಿ ವಾತಾವರಣ ನಿರ್ಮಾಣ ಮಾಡುವುದಕ್ಕೆ ತಯಾರಾಗಬೇಕು. ಅವರಿಗೆ ಸರ್ಕಾರದ ವತಿಯಿಂದ ಏನು ಸಹಾಯ ಬೇಕು, ಖಂಡಿತವಾಗಿ ಡಿಜಿಯವರ ಮುಖಾಂತರ ಎಸ್‌ಪಿಗೆ ಹೇಳಿ ಶಾಂತಿ ಕಾಪಾಡುವುದಕ್ಕೆ ಯಾವ ಯಾವ ರೀತಿಯಿಂದ ಸಹಕರಿಸಬೇಕು ಆ ರೀತಿಯಲ್ಲಿ ಅದನ್ನು ಸರ್ಕಾರ ಸಹಕರಿಸುತ್ತದೆ. ಇಂತಹ ಘಟನೆಗಳು ಬೇರೆ ಹಳ್ಳಿಗಳಲ್ಲಿ ನಡೆಯಬಾರದು. ಇದೇ ಒಂದು ವಾತಾವರಣ ಐದಾರು ಹಳ್ಳಿಗಳಲ್ಲಿ ಇದೆ, ಅಂತಹ ಸಿಚುಯೇಷನ್ ಅವಾಯ್ಡ್ ಮಾಡುವುದಕ್ಕೆ ತಾವು ಯಾವುದೇ ರೀತಿಯಿಂದ ಅದನ್ನು ತಡೆಹಿಡಿಯುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿದ್ದಾರೆ, ಅದನ್ನು ನಾನು ತಕ್ಷಣ ಎಸ್‌ಪಿಯವರಿಗೆ ಡಿಜಿಯವರ ಮುಖಾಂತರ ಮಾತನಾಡಿಸಿ ಆ ಕ್ರಮವನ್ನು ಜರುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮೂರನೆಯದು ನಾನು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ, ವಾಗೇಶ್ ದಾನಪ್ಪ ಬಣಕಾರ್ ಮತ್ತು 57 ಜನರು ಏನಿದ್ದಾರೆ ಅವರಲ್ಲಿ ಈಗಾಗಲೇ 22 ಜನರಿಗೆ ನಾವು ಅರೆಸ್ಟ್ ಮಾಡಿದ್ದೇವೆ. ಅವರು ಜ್ಯುಡಿಷಿಯಲ್ ಕಸ್ಟಡಿಯಲ್ಲಿದ್ದಾರೆ. ಇನ್ನು ಉಳಿದವರು ಹೊರಗಡೆ ಇದ್ದರೂ ಇನ್‌ವೆಸ್ಟಿಗೇಷನ್‌ನಲ್ಲಿ ಬರುತ್ತಾರೆ. ಹಾಗೆ ಬಂದರೆ ಅಂತಹವರು ಯಾರೇ ಇದ್ದರೂ

ಕಾನೂನು ಪ್ರಕಾರ ಅವರ ಮೇಲೆ ಕ್ರಮ ಜರುಗಿಸುತ್ತೇವೆ. ತಾವು ಕೊಟ್ಟ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ ಇಂತಹ ಘಟನೆಗಳು ಮುಂದೆ ನಡೆಯಬಾರದು ಎಂದು ಪ್ರಿಕಾಷನರಿ ಮೆಷರ್ಸ್ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಸಚಿವರು ಕಾನೂನು ರೀತಿಯಿಂದ ಕಾಂಪನ್‌ಸೇಷನ್ ಕೊಡುವುದಕ್ಕೆ ಬರುವುದಿಲ್ಲ ಎಂದು ಹೇಳಿದರು, ಮನಸ್ಸು ಇದ್ದಲ್ಲಿ ಮಾರ್ಗ ಇದೆ. ಅಲ್ಲಿ 32 ವರ್ಷದ ಯುವಕ ಮರಣ ಹೊಂದಿದ್ದಾನೆ, ಮದುವೆಯಾಗಿ ಏಳು ತಿಂಗಳಾಗಿವೆ, ಅವನ ಮನೆಯಲ್ಲಿ ಅವನ ತಂದೆ ಇಲ್ಲ, ಮರಣ ಹೊಂದಿದ್ದಾರೆ. ಈ ಮಾನವೀಯ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಪರಿಹಾರ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ತಮ್ಮ ಮೂಲಕ ಮಾನ್ಯ ಗೃಹ ಸಚಿವರಿಗೆ ಮತ್ತು ಕಾನೂನು ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ, ಮಾನ್ಯ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಪರಿಹಾರ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಬಹುಶಃ ತಾವು ಸಹಿತ ಈ ವಿಚಾರದಲ್ಲಿ ನನ್ನ ಸಹಾಯಕ್ಕೆ ಬರಬೇಕೆಂದು ಕೇಳಿಕೊಂಡು, ಪರಿಹಾರವನ್ನು ನೊಂದ ಕುಟುಂಬಕ್ಕೆ ಕೊಡುವ ವ್ಯವಸ್ಥೆ ಮಾಡುತ್ತೀರಿ ಎಂದು ತಿಳಿದುಕೊಂಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೇರವಾಗಿ ಮಾನ್ಯ ಮುಖ್ಯಮಂತ್ರಿಯವರೇ ಹೇಳಿದರೆ, ಮುಖ್ಯಮಂತ್ರಿಯವರ ನಿಧಿಯಿಂದ ಕೊಡುವುದಕ್ಕೆ ಸಾಧ್ಯವಿದ್ದರೆ ಕೊಡಬಹುದು. ನನಗೆ ಗೊತ್ತಿದ್ದ ಹಾಗೆ ಇತ್ತೀಚೆಗೆ ಅವರು ಬರೀ ಕ್ಯಾನ್ಸರ್ ಪೇಶೆಂಟ್‌ಗಳಿಗೆ, ಕಿಡ್ನಿ ಮತ್ತು ಹಾರ್ಟ್ ಪೇಶೆಂಟ್‌ಗಳಿಗೆ ಮಾತ್ರ ಮುಖ್ಯಮಂತ್ರಿಗಳ ನಿಧಿಯಿಂದ ಉಪಯೋಗ ಮಾಡುತ್ತಿದ್ದಾರೆ. ಇಂತಹ ಕ್ರಿಮಿನಲ್ ಕೇಸ್‌ಗೆ ಕೊಡತಕ್ಕಂಥದ್ದು ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಹಣ ಕೊಡತಕ್ಕಂಥಾದ್ದು ಆಗಲಿಲ್ಲ. ನಮ್ಮ ರಾಜ್ಯದಲ್ಲಿ ಪ್ರತಿ ವರ್ಷಕ್ಕೆ ಸರಾಸರಿ 1500 ರಿಂದ 1600 ಜನರ ಕೊಲೆಗಳಾಗುತ್ತಿವೆ. ಈ ರೀತಿ ಸತ್ತವರ ಎಲ್ಲಾ ಕುಟುಂಬಗಳಿಗೂ ಪರಿಹಾರವನ್ನು ಕೊಡುವುದಕ್ಕೆ ಆಗುವುದಿಲ್ಲ. ಮಾನ್ಯ ಬನ್ನಿಕೋಡ್‌ರವರು ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದು ನಾಳೆಯೇ ಕೇಳಿಕೊಳ್ಳಲಿ. ಪರಿಹಾರ ಕೊಡುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಅವರ ಇಲಾಖೆಗೆ ಬಿಟ್ಟ ವಿಚಾರ. ಆದರೂ ಕೂಡ ನಾನು ಯಾವ ರೀತಿಯಲ್ಲಿ ಮುಖ್ಯಮಂತ್ರಿಗಳಿಗೆ ಹೇಳಬಹುದು ಎಂಬುದನ್ನು ನೋಡಿ ಹೇಳುತ್ತೇನೆ. ನನಗೆ ಅಲ್ಲಿ ಸತ್ತ ಕುಟುಂಬದವರಿಗೆ ಪರಿಹಾರ ಕೊಡಬೇಕೆನ್ನುವ ಮನಸ್ಸು ಇದೆ. ಆದರೆ ಇದಕ್ಕೆ ಸರ್ಕಾರದ ಆದೇಶಗಳು ಅಡ್ಡಿ ಬರುತ್ತವೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಈಗ ಅಲ್ಲಿ ಯಾರು 32 ವರ್ಷದವರು ಸತ್ತಿದ್ದಾರೆ ಆತ ಬಳೆ ಮಾರಿಕೊಂಡು ಜೀವನ ನಡೆಸುತ್ತಿದ್ದವನಾಗಿದ್ದ. ಇಂಥ ಒಬ್ಬ ಬಡವನೇನು ಸತ್ತಿದ್ದಾನೆ ಆತನ ಕುಟುಂಬಕ್ಕೆ ಸರ್ಕಾರ ತನ್ನ ಸಹಾಯ ಹಸ್ತವನ್ನು ತೋರಿಸಬೇಕು. ನಾನೂ ಕೂಡ ಮುಖ್ಯಮಂತ್ರಿಗಳಿಗೆ ಆತನ ಕುಟುಂಬಕ್ಕೆ ಪರಿಹಾರವನ್ನು ಕೊಡಬೇಕೆಂದು ಕೇಳಿಕೊಂಡು ವಿನಂತಿ ಮಾಡಿಕೊಳ್ಳುತ್ತೇನೆ. ತಾವೂ ಕೂಡ ದಯವಿಟ್ಟು ಅವರಿಗೆ ಹೇಳಬೇಕು.